ನೀವು ಒಂದು ಪೂಜೆ ಮಾಡಿಸಿ ಒಂದು ಬೆಳ್ಳಿ ಗಿಳಿ ಮಾಡಿಸಲಿಕ್ಕೆ ದುಡ್ಡು ಕೊಟ್ಟರೆ ನಿಮ್ಮ ಸ್ನೇಹಿತರು ನಿಮಗೆ ದೋಖಾ ಮಾಡ್ತಾರೋ ಇಲ್ಲವೋ ಅನ್ನೋದನ್ನು ಗಿಳಿ ಹೇಳ್ತದೆ.'

'ಮಗನೆ, ನಾ ನಿನಗೆ ಬಾಳ ಸಲ ಹೇಳ್ತಾ ಬಂದೇನಿ. ಯಾರನ್ನೂ ನಂಬಬ್ಯಾಡ ಅಂತ. ಯಾರು ಅಂವನು ಗೆಳೆಯ? ಎದಕ್ಕ ನಿನ್ನ ಹತ್ತಿರ ಬರ್ತಾನೆ? ನೋಡು, ಗಿರಿಯಪ್ಪ ಎಷ್ಟು ಕರೆಕ್ಟಾಗಿ ಹೇಳಿದ. ನಿನ್ನ ಜೀಂವ ಉಳಿಸಿದ. ಗಿರಿಯಪ್ಪ, ಬೆಳ್ಳಿ ಗಿಳಿ ಮಾಡಿಸೋ ಖರ್ಚು ನಾ ಕೊಡ್ತೇನಿ. ದಯವಿಟ್ಟು ನನ್ನ ಮಗಗ ಏನೂ ಆಗಲಾರದಂಗ ನೋಡಪಾ.'

'ಆಮ್ಯಾಲ ತಾಯೆ, ಇದನ್ನ ನಾನು ನಿನ್ನ ಮಗಗ ಎದುರು ಹೇಳಬಾರದು. ಆದರ ಅವನ ಹುಷಾರಿಗೆ ಅಂತ ಹೇಳ್ತಾ ಇದೇನಿ. ವಯಸ್ಸಾದ ಒಬ್ಬ ಹೆಣ್ಣುಮಗಳು ಅಥವಾ ಗಂಡನನ್ನು ತೊರೆದಂತಹ ಒಬ್ಬ ಹೆಂಗಸು ಇಲ್ಲಾ ಗಂಡ ಸತ್ತ ಒಬ್ಬ ವಿಧವೆ ನಿನ್ನ ಮಗನಿಗೆ ಗಂಟು ಬೀಳ್ತಾಳೆ. ನಾಲ್ಕು ಜನರ ನಡುವೆ ದೇವಪ್ಪನಿಗೆ ಅಪಚಾರ, ಅಪಮಾನ ಆಗ್ತದೆ. ಆದರೆ ಅದರ ಪರಿಹಾರವನ್ನು ಈ ಗಿರಿಯಪ್ಪ ನಿಮಗೆ ಸೂಚಿಸ್ತಾ ಇದಾನೆ. ಸರಿಯಾಗಿ ಎಚ್ಚರಿಕೆ ವಹಿಸುವಂಥ ಕ್ರಮವನ್ನ ನಾವು ಹೇಳಿಕೊಡ್ತೀವಿ. ಇದನ್ನು ಹೆಚ್ಚಾಗಿ ನಾವು ಶಾಸ್ತ್ರದವರು ಯಾರಿಗೂ ಹೇಳಂಗಿಲ್ಲ.

ತಾಯಿ, ಯಾಕೆ ಹೇಳ್ತಾ ಇದೇವಿಯಂದ್ರ ಇದು ಜೀವನ ಮತ್ತು ಮರಣದ ಪ್ರಶ್ನೆ ಆಗೇದ. ನನಗೆ ನಿಮ್ಮ ಮಗನ ಜೀವನ ಮುಖ್ಯ ಆಗೇದ. ದಯವಿಟ್ಟು ನಾವು ಕೇಳುವ ದುಡ್ಡು ಬಾಳ ಆಯ್ತು ಅಂತ ಅನಕೋಬ್ಯಾಡ್ರಿ. ನೀವು ಕೊಟ್ಟಂತಹ ದುಡ್ಡು ನಮ್ಮ ಕಡೆ ನಿಲ್ಲಲ್ಲ. ಆದರೆ ನಾವು ನಿಮಗೆ ಕೊಟ್ಟಂತಹ ತಿರುವು ನಿಮಗೆ ಹೊಸ ಬದುಕು ಕೊಡ್ತದ. ನಿಮ್ಮ ಜೀವನದ ಅದೃಷ್ಟದುರಾದೃಷ್ಟಗಳನ್ನ ನಾವು ಹೇಳ್ತಾ ಇದೀವಿ. ಅದೃಷ್ಟನ್ನ ಹೆಂಗ ಕೈಮಾಡಿ ಕರೀಬೇಕು, ದುರಾದೃಷ್ಟದಿಂದ ಹೆಂಗ ತಪ್ಪಿಸಕೋಬೇಕು ಅಂತ ಹೇಳ್ತೇವೇ ತಾಯಿ, ದಯಮಾಡಿ ನಿಮ್ಮ ಜೀವನದ ದಾರಿ ತೆರೆಯುವಂಥ ಈ ಗಿಣಿಶಾಸ್ತ್ರಕ್ಕೆ ನೀವು ತೆರೆದ ಮನಸ್ಸಿನಿಂದ ಸಾವಿರದಾ ಒಂದು ರೂಪಾಯಿ ಇಡಬೇಕು ತಾಯಿ. ಈ ಶಾಸ್ತ್ರದ ಗಿರಿಯಪ್ಪ ಬಾಳ ಕೇಳ್ತಾ ಇದಾನೆ ಅಂತ ನೀವು ಅಂದಕೋಬಹುದು. ಆದರೆ ತಾಯಿ, ಒಂದು ಚೀಲ ಜೋಳ, ಒಂದು ಚೀಲ ಗೋಧಿ, ಸ್ವಲ್ಪ ಅಕ್ಕಿ ನಿಮ್ಮ ಹೆಸರಿನಿಂದ ನಮ್ಮ ಮನಿಗೆ ಬಂದ ಬೀಳ್ತಾವು ತಾಯೆ. ನಾನು ಮಾಡಿಕೊಡುವಂಥ ಈ ಚೀಟಿಯನ್ನ ನಿಮ್ಮ ಮಗ ಇಟ್ಟುಕೊಂಡ್ರ ಸಾವಿರ ರೂಪಾಯಿಯ ಹತ್ತು ಪಟ್ಟು ಗಳಿಸ್ತಾನ ತಾಯಿ. ದ್ಯಾವಪ್ಪ ಈಗ ಐದು ರೂಪಾಯಿ ದುಡಿದರೆ ಹತ್ತು ರೂಪಾಯಿ ಖರ್ಚು ಆಗ್ತಾ ಇದೆ. ಅದು ನಿಜಾನಾ? ಸುಳ್ಳಾ? ನೀನೆ ಕೇಳು ತಾಯಿ'.

ಗಿರಿಯಪ್ಪ ಹೇಳುತ್ತಿರುವುದು ಖರೆ ಎನ್ನುವಂತೆ ದೇವಪ್ಪ ಗೋಣು ಹಾಕಿದ. ಈಗಂತೂ ಶಿವವ್ವನಿಗೆ ಈ ಗಿರಿಯಪ್ಪ ಬಂದಿರದಿದ್ದರೆ ತಮ್ಮ ಮನೆ ನಾಶವಾಗಿ ಹೋಗುತ್ತಿತ್ತು ಎಂಬ ಭಾವನೆ ಬರತೊಡಗಿತು.

'ಆಮೇಲೆ ದೇವಪ್ಪ, ಈ ಮಾತನ್ನು ಬಾಳ ಲಕ್ಷ್ಯದಿಂದ ಕೇಳಿಸಿಕೊಳ್ಳಿರಿ. ನಾಲ್ಕೂ ದಿಕ್ಕಿನಿಂದ ಬರುವಂಥ ಹಸುಗಳಿಗೆ ಏನಾದರೂ ಬಾಳೆಹಣ್ಣು, ಅಕ್ಕಿ, ಗೋಧಿ ಇತ್ಯಾದಿಗಳನ್ನು ತಿನ್ನಿಸಬೇಕು. ದಿಕ್ಕುಗಳನ್ನು ಸರಿಯಾಗಿ ನೋಡಬೇಕು ಇದನ್ನು ಮಾಡಬೇಕು. ತಾಯಿ, ನಿಮ್ಮ ಮಗ ಕಂಟಕಗಳಿಂದ ತಪ್ಪಿಸಿಕೊಳ್ಳಬೇಕೆಂದರೆ ಇದನ್ನು ಮಾಡಬೇಕು.'

'ಅಲ್ಲೋ ಗಿರಿಯಪ್ಪ, ನನ್ನ ಮಗಗ ಸೂರ್ಯ ಯಾವ ದಿಕ್ಕಿಗೆ ಹುಟ್ಟತಾನಂತ ಗೊತ್ತಿಲ್ಲ. ಅಂತಹದರಾಗ ಪೂರ್ವ ಯಾವುದು, ಪಶ್ಚಿಮ ಯಾವುದು, ದಕ್ಷಿಣ ಯಾವುದು ಅಂತ ಅವನು ಹುಡುಕೋದರಾಗ ಸಂಜೀ ಆಗಿರ್ತದ. ನಾಲ್ಕೂ ದಿಕ್ಕು ಹುಡುಕಿ ಆಕಳಿಗೆ ತಿನಿಸೋದಂದ್ರ ಅಂವನ ಕೈಯಿಂದ ಆಗದ ಮಾತು. ನಿನ್ನ ಕೈಮುಗಿತೀನಿ. ಅದೇನು ಮಾಡೋದೈತಿ ಅದನ್ನು ಅಂವನ ಹೆಸರಿನಿಂದ ನೀನೆ ಮಾಡಿ ಮುಗಿಸು. ಒಲ್ಲೆ ಅನ್ನಬ್ಯಾಡ. ಅದರ ಖರ್ಚು ನಾ ಕೊಡ್ತೇನಿ.'

'ಆಗಲಿ ತಾಯಿ, ಆದರ ಆ ದುಡ್ಡು ಅಂವನ ಕೈಯಿಂದ ಕೊಡಿಸ್ರಿ. ಆ ಭಗವಂತನಾದ್ರೂ ಕೃಪೆ ತೋರ್ತಾನೆ. ಆಮ್ಯಾಲ ಏನೇ ಕೆಲಸ ಮಾಡಿದರೂ ಪಾರ್ಟನರ್‌ಶಿಪ್ ಮ್ಯಾಲ ಮಾಡಬೇಡ ದೇವಪ್ಪ, ಸ್ವಂತ ಮಾಡಿ. ಅಂದರೆ ಒಬ್ಬರೆ ಮಾಡಿ, ಮತ್ತೊಬ್ಬರನ್ನು ನಂಬಿ ಅವರ ಕೈಗೆ ಹಗ್ಗ ಕೊಡಬೇಡಿ. ಆಯ್ತಾ ತಾಯೆ. ನಾವಿನ್ನು ಬರ್ತೇವಿ ತಾಯಿ, ನಿಮ್ಮ ಆಶೀರ್ವಾದ ಸದಾ ಈ ಗಿಳಿ ಗಿರಿಯಪ್ಪನ ಮೇಲೆ ಇರಲಿ.

'ತಾಯೆ, ನೀನೇನು ಭಗವಂತನ ಮ್ಯಾಲ ನಂಬಿಕೆಯಿಟ್ಟು ಈ ಸಾವಿರದ ಐನೂರು ಒಂದು ರೂಪಾಯಿ ಕೊಟ್ಟೇದಿಯಲ್ಲ, ಇದರಿಂದ ನಿನಗೂ ನಿನ್ನ ಮಗ ದೇವಪ್ಪಗೂ ಒಳ್ಳೆದಾಗ್ತದೆ. ಮದುವಿ ಆಗೋದು ಕಷ್ಟ ಇತ್ತು. ಆದರೆ ನನ್ನ ಚೀಟಿಯಿಂದ ಆ ಕಂಟಕ ದೂರಾಗಿದೆ ತಾಯಿ. ಆದರೆ ಸ್ತ್ರೀ ಕಂಟಕ ಏನಿದೆ, ಅದನ್ನು ಹೋಗಲಾಡಿಸೋ ಬಗ್ಗೆ ಮುಂದಿನ ಸಲ ಹೇಳ್ತೇನಿ. ನಿಮ್ಮ ಮನೆಯಲ್ಲಿ ಅರ್ಧ ದಿನ ಹೋಯ್ತು ತಾಯಿ. ಅಂವನ ಕಲ್ಯಾಣ ಖಂಡಿತ ಆಗ್ತದೆ. ಒಂದು



